ಸಕ್ಕರೆ ಬೆಲೆ ನಿಗಧಿ

260(687); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

1) ರಾಜ್ಯದಲ್ಲಿ 2014–15ನೇ ಸಾಲಿನಲ್ಲಿ ಯಾವ ಆಧಾರದ ಮೇಲೆ ಸಕ್ಕರೆ ಬೆಲೆ ನಿಗದಿಗೊಳಿಸಲಾಗಿದೆ (ವಿವರ ನೀಡುವುದು)

2) ಮೈಸೂರು ಭಾಗ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದ ಎಲ್ಲಾ ಕಾರ್ಖಾನೆಗಳು ಲೋ ರಿಕವರಿ ಜೋನ್‌ನಲ್ಲಿ ಬಂದಿದ್ದರೂ ಮೈಸೂರು ಭಾಗದ ಕಾರ್ಖಾನೆಗಳಿಗೆ ಗೇಟ್ ಕೇನ್ ದರ ಮತ್ತು ಹೈದ್ರಾಬಾದ್ ಭಾಗದ ಕಾರ್ಖಾನೆಗೆ ಫೀಲ್ಡ್ ಕೇನ್ ದರನಿಗದಿಪಡಿಸಿರುವುದು ತಾರತಮ್ಯವಾಗುವುದಿಲ್ಲವೇ?

3) ಹಾಗಿದ್ದಲ್ಲಿ ಸರ್ಕಾರ ಈ ತಾರತಮ್ಯವನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳುವುದು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು)

1) ರಾಜ್ಯದಲ್ಲಾಗಲೀ ರಾಷ್ಟ್ರಮಟ್ಟದಲ್ಲಾಗಲೀ ಸಕ್ಕರೆಗೆ ಬೆಲೆ ನಿಗದಿಪಡಿಸುವ ಪದ್ದತಿ ಇರುವುದಿಲ್ಲ. ಸಕ್ಕರೆ ಬೆಲೆಯು ಮುಕ್ತ ಮಾರುಕಟ್ಟೆಯಲ್ಲಿನ ಬೆಲೆಗಳ ಆಧಾರದ ಮೇಲೆ ನಿರ್ಧಾರವಾಗುತ್ತದೆ.

ಆದರೆ ಕೇಂದ್ರ ಸರ್ಕಾರವು ಕಬ್ಬಿಗೆ ಪ್ರತಿ ವರ್ಷ **ನ್ಯಾಯಯುತ ಹಾಗೂ ಲಾಭದಾಯಕ ಬೆಲೆ (Fair & Remunerative Price)** ದರ ನಿಗದಿ ಪಡಿಸುತ್ತದೆ. 2013–14ನೇ ಸಾಲಿಗೆ ಎಫ್.ಆರ್.ಪಿ. ಎಂದು ಪ್ರತಿ ಮೆ.ಟನ್ ಕಬ್ಬಿಗೆ ` 2100/– ನಿಗದಿಪಡಿಸಿರುತ್ತದೆ. ರಾಜ್ಯ ಸರ್ಕಾರವು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013ನ್ನು ದಿನಾಂಕ 12–03–2013ರಲ್ಲಿ ಜಾರಿಗೆ ತಂದಿರುತ್ತದೆ. ಇದರ ಅನ್ವಯ ದಿನಾಂಕ 04–09–2013 ರಂದು ಕಬ್ಬು

ನಿಯಂತ್ರಣ ಮಂಡಳಿ ರಚಿಸಿದ್ದು ಸದರಿ ಮಂಡಳಿಯು ಈ ಕೆಳಕಂಡಂತೆ ರಾಜ್ಯದ ಕಬ್ಬು ದರ ನಿಗದಿಪಡಿಸಿರುತ್ತದೆ.

- **ದಕ್ಷಿಣ ಕರ್ನಾಟಕ ಭಾಗಕ್ಕೆ ಎಕ್ಸ್ ಗೇಟ್ ದರದಲ್ಲಿ ಪ್ರತಿ ಮೆ.ಟನ್‌ಗೆ ` 2500/–**
- **ಉತ್ತರ ಕರ್ನಾಟಕ ಭಾಗಕ್ಕೆ ಎಕ್ಸ್ ಫೀಲ್ಡ್ ದರದಲ್ಲಿ ಪ್ರತಿ ಮೆ.ಟನ್‌ಗೆ ` 2500/–**

2) ಕಬ್ಬು ನಿಯಂತ್ರಣ ಮಂಡಳಿಯು ರಾಜ್ಯದ ಉತ್ತರ ಮತ್ತು ದಕ್ಷಿಣ ಭಾಗದ ಕಾರ್ಖಾನೆಗಳ ಸಕ್ಕರೆ ಇಳುವರಿ ಪ್ರಮಾಣವನ್ನು ಆಧರಿಸಿ ಹಾಗೂ 2013–14ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಕಾರ್ಖಾನೆಗಳಿಗೆ ನೀಡಲಾಗಿರುವ ಸವಲತ್ತುಗಳಾದ ಕಬ್ಬು ಖರೀದಿ ತೆರಿಗೆ ಮನ್ನಾ, ರಸ್ತೆಕರ ಮನ್ನಾ ಹಾಗೂ ಸಕ್ಕರೆ ಮಾರಾಟದ ಮೇಲಿನ ಮೌಲ್ಯವರ್ಧಿತ ತೆರಿಗೆಗಳ ವಿನಾಯಿತಿಯನ್ನು ಗಮನದಲ್ಲಿಟ್ಟುಕೊಂಡು 2013–14ನೇ ಸಾಲಿಗೆ ಸಂಬಂಧಿಸಿದಂತೆ ಕಬ್ಬಿನ ದರವನ್ನು ಮೇಲ್ಕಂಡಂತೆ ನಿಗದಿಪಡಿಸಿರುತ್ತದೆ.

ದಕ್ಷಿಣ ಕರ್ನಾಟಕ ಭಾಗದ ಕಾರ್ಖಾನೆಗಳ ಸಕ್ಕರೆ ಇಳುವರಿ ಆಧಾರದ ಮೇಲೆ ಎಕ್ಸ್‌ಗೇಟ್ ದರದಲ್ಲಿ ಮತ್ತು ಉತ್ತರ ಕರ್ನಾಟಕ ಭಾಗದ ಕಾರ್ಖಾನೆಗಳ ಸಕ್ಕರೆ ಇಳುವರಿ ಮೇಲೆ ಎಕ್ಸ್–ಫೀಲ್ಡ್ ದರದಲ್ಲಿ ರೈತರ ಕಬ್ಬು ಬಿಲ್ಲನ್ನು ಪಾವತಿಸುತ್ತಿರುವ ಪದ್ಧತಿಯು 2013–14ನೇ ಸಾಲಿನಲ್ಲಿ ಕಬ್ಬಿಗೆ ಬೆಲೆ ನಿಗದಿ ಪಡಿಸಿರುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ತಾರತಮ್ಯ ಉಂಟಾಗುವುದಿಲ್ಲ.

3) ಪ್ರಶ್ನೆ ಉದ್ಭವಿಸುವುದಿಲ್ಲ.